ಕನ್ನಡಪ್ರಭ



# ಜೈನ್ ವಿವಿಗೆ ಪ್ರಶಸ್ತಿ ಡಬಲ್

**ಬೆಂಗಳೂರು:** ಸ್ಥಳೀಯ ಜೈನ್ ವಿಶ್ವವಿದ್ಯಾಲಯ ತಂಡದ ಸ್ಪರ್ಧಿಗಳು ಚೆನ್ನೈನಲ್ಲಿ ನಡೆದ ಅಖಿಲ ಭಾರತ ಅಂತರ ಕಾಲೇಜುಗಳ ಬಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಪುರುಷ ಮತ್ತು ಮಹಿಳೆಯರ ವಿಭಾಗಗಳೆರಡರಲ್ಲೂ ಚಾಂಪಿಯನ್ ಆಗಿ ಹೊರಹೊಮ್ಮುವ ಮೂಲಕ ರಾಘವೇಂದ್ರ ಟ್ರೋಫಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಪುರುಷರ ವಿಭಾಗದ ಫೈನಲ್ ಪಂದ್ಯದಲ್ಲಿ ಜೈನ್ ವಿವಿ ತಂಡದ ಆಟಗಾರರು 88-81 ಅಂಕಗಳಿಂದ ಚೆನ್ನೈನ ಹಿಂದುಸ್ತಾನ ವಿಶ್ವವಿದ್ಯಾಲಯ ತಂಡವನ್ನು ಸೋಲಿಸಿದರು. ವಿರಾಮದ ವೇಳೆಗೆ ಕೇವಲ ಒಂದು ಅಂಕದಿಂದ (44-43) ಮುಂದಿದ್ದ ಬೆಂಗಳೂರು ತಂಡ, ನಂತರದಲ್ಲಿ ಉತ್ತಮ ಆಟ ಪ್ರದರ್ಶಿಸುವ ಮೂಲಕ ಅಂತಿಮವಾಗಿ ರೋಚಕ ಗೆಲವು ತಮ್ಮದಾಗಿಸಿಕೊಂಡರು. ಪಿ. ವಿಶು 28 ಮತ್ತು ಕೈಫ್ 19 ಅಂಕಗಳಿಸಿ ಜೈನ್ ವಿವಿ ತಂಡಕ್ಕೆ ಗೆಲುವು ತಂದುಕೊಟ್ಟರು.

ಇನ್ನು ಮಹಿಳೆಯರ ವಿಭಾಗದ ಫೈನಲ್ ಪಂದ್ಯದಲ್ಲಿ ಬೆಂಗಳೂರು ಜೈನ್ ವಿವಿ ಆಟಗಾರ್ತಿಯರು 72-64 ಅಂಕಗಳಿಂದ ಚೆನ್ನೈನ ಎಂಒಪಿ ವೈಷ್ಣವ್ ತಂಡದ ವಿರುದ್ಧ ಜಯಗಳಿಸಿ ಪ್ರಶಸ್ತಿಯ ಗರಿ ಮೂಡಿಸಿಕೊಂಡರು. ವಿಜೇತ ತಂಡದ ಪರ ರೋಷಿಣಿ 30, ಸಿಮೋನೆಲ್ಲೆ 22 ಮತ್ತು ಮಧು 14 ಅಂಗಳಿಸಿ ಗಮನ ಸೆಳೆದರು. ಇದರೊಂದಿಗೆ ಜೈನ್ ವಿವಿ ಮಹಿಳಾ ತಂಡ ಸತತ ಮೂರನೇ ಬಾರಿಗೆ ಈ ಪ್ರಶಸ್ತಿ ಗೆದ್ದ ಸಾಧನೆ ಮಾಡಿತು.

ವಿಜೇತ ತಂಡಗಳು 10 ಸಾವಿರ ನಗದು ಬಹುಮಾನ ಮತ್ತು ಟ್ರೋಫಿ ಪಡೆದುಕೊಂಡವು. ಬೆಂಗಳೂರು ಜೈನ್ ವಿವಿ ತಂಡದ ವಿಶು ಮತ್ತು ಸಿಮೋನೆಲ್ಲೆ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಉತ್ತಮ ಪ್ರತಿಭೆಗಳಾಗಿ ಹೊರಹೊಮ್ಮಿದರು.